ಪ್ರಶ್ನೆಗೆ ಅವರು ತಮ್ಮ ಕಛೇರಿಗೆ ಬರಲಿ, ಆ ಬಗ್ಗೆ ಚರ್ಚೆ ಮಾಡೋಣ ಎಂದು ಹೇಳುತ್ತಿದ್ದಾರೆ.

ಅಧ್ಯಕ್ಷರು: ಮಾನ್ಯ ಸದಸ್ಯರು ಕೇಳಿದ ವಿಷಯವೇ ಬೇರೆಯಾಗಿದೆ.

ಶ್ರೀ ಡಿ.ವಿ.ಸದಾನಂದಗೌಡ: ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಗಳು ಕೊಡುವಂತಹ ಉತ್ತರದ ಧಾಟಿ ಹೇಗಿದೆ ಎಂಬುದನ್ನು ಮಾನ್ಯ ಮಂತ್ರಿಗಳು ಆಲೋಚನೆ ಮಾಡಬೇಕು. ಮಾನ್ಯ ವಿಶ್ವೇಶ್ವರ ಹೆಗಡೆಯವರ ಪ್ರಶ್ನೆಗೆ ಉತ್ತರ ಕೊಡದೇ ಅರ್ಧ ಗಂಟೆ ಚರ್ಚೆ ಮಾಡೋಣ ಎಂದು ಹೇಳಿದರು. ಮಾನ್ಯ ನೀಲಕಂಠಪ್ಪನವರ ಪ್ರಶ್ನೆಗೆ ಉತ್ತರ ನೀಡಿದರು. ಹೀಗಾದರೆ ಹೇಗೆ?.....

ಶ್ರೀ ಆರ್.ರೋಷನ್ ಬೇಗ್: ಮಾನ್ಯ ನೀಲಕಂಠಪ್ಪನವರು ಕೇಳಿದ ಪ್ರಶ್ನೆಯೇ ಬೇರೆ, ಮಾನ್ಯ ವಿಶ್ವೇಶ್ವರ ಹೆಗಡೆಯವರು ಕೇಳಿದ ಪ್ರಶ್ನೆಯೇ ಬೇರೆ.

(ಗೊಂದಲ)

ಅಧ್ಯಕ್ಷರು: ಮಾನ್ಯ ಮಂತ್ರಿಗಳೆ, ಇಬ್ಬರು ಮಾನ್ಯ ಸದಸ್ಯರನ್ನೂ ಕೂಡಿ ತಮ್ಮ ಕಛೇರಿಗೆ ಕರೆಸಿಕೊಂಡು ಮಾತನಾಡಿ.

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಮಾನ್ಯ ಮಂತ್ರಿಗಳು ಕೋರಿದಂತೆ ಮಾನ್ಯ ಅಧ್ಯಕ್ಷರು ಅರ್ಧ ಗಂಟೆ ಕಾಲ ಚರ್ಚೆಗೆ ಸಮಯವನ್ನು ನಿಗದಿ ಮಾಡಲಿ. ನಾವು ಅದಕ್ಕೆ ಸಿದ್ಧರಿದ್ದೇವೆ.

ಅಧ್ಯಕ್ಷರು: ಯಾರು ಪ್ರಶ್ನೆ ಕೇಳುತ್ತಾರೋ ಅವರೇ ಅರ್ಧ ಗಂಟೆ ಚರ್ಚೆಗೆ ಬರೆದು ಕಳುಹಿಸಿಕೊಡಬೇಕು. ಮಾನ್ಯ ಸದಸ್ಯರು ಆ ರೀತಿ ಬರೆದು ಕಳುಹಿಸಿದರೆ ನಾನು ಅರ್ಧ ಗಂಟೆ ಚರ್ಚೆಗೆ ಸಮಯವನ್ನು ನಿಶ್ಚಯ ಮಾಡುತ್ತೇನೆ.

ಅಲಕ್ಷ್ಯಕ್ಕೊಳಗೊಂಡಿರುವ ಗಡಿ ಭಾಗದ ಕನ್ನಡ ಭಾಷೆ.

70(618)

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು(ಶಿವಾಜಿನಗರ): ಸನ್ಮಾನ್ಯ ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಆ) ಕನ್ನಡ ಸಮಗ್ರ ಅಭಿವೃದ್ಧಿ ಯೋಜನೆಯನ್ನು ರೂಪಿಸಲು ಬಜೆಟ್‌ನಲ್ಲಿ ಎಷ್ಟು ಕೋಟಿ ರೂ.ಮೊತ್ತವನ್ನು ಮೀಸಲಿಡಲಾಗಿದೆ.

ಆ) ಅಲಕ್ಷಿತಗೊಂಡಿರುವ ಆ ಗಡಿ ಪ್ರದೇಶದ ಗ್ರಾಮಗಳಿಗೆ ಹಾಗೂ ಕನ್ನಡ ಭಾಷೆಯ ರಕ್ಷಣೆ ಅಧ್ಯಯನ ಮಾಡಲು ನೇಮಿಸಿದ ಆಯೋಗದ ವರದಿಯನ್ನು ಸರ್ಕಾರ ಅನುಷ್ಠಾನಗೊಳಿಸುವುದೆ?

ಇ) ವರದಿಯ ಸಾರಾಂಶಗಳೇನು ಮತ್ತು ಈ ಗಡಿ ಭಾಗದ ರಕ್ಷಣೆ ಹಾಗೂ ಸೌಲಭ್ಯಗಳನ್ನು ವಿಸ್ತರಿಸಲು ಯಾವ ಕ್ರಮ ಕೈಗೊಳ್ಳಲಾಗಿದೆ.

ಶ್ರೀಮತಿ ರಾಣಿ ಸತೀಶ್ (ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರು):

ಅ) ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯಕ್ಕೆ ರೂ.44.00 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ. ಅಲ್ಲದೆ ಕನ್ನಡ ಅಭಿವೃದ್ಧಿ ಪ್ರಾಧಿಕಾರಕ್ಕೆ ರೂ.33.00 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ.

ಆ) ಆಯೋಗದ ಮಧ್ಯಂತರ ವರದಿಯ ಶಿಫಾರಸ್ಸುಗಳ ಅನುಷ್ಠಾನ ಕುರಿತು ಪರಿಶೀಲಿಸಲಾಗುತ್ತಿದೆ

ಇ) ಆಯೋಗದ ಮಧ್ಯಂತರ ವರದಿಯ ಶಿಫಾರಸ್ಸುಗಳನ್ನು ಅನುಬಂಧದಲ್ಲಿ ಲಗತ್ತಿಸಲಾಗಿದೆ. ಶಿಫಾರಸ್ಸು ಅನುಷ್ಠಾನದ ಬಗ್ಗೆ ಪರಿಶೀಲಿಸಲಾಗುತ್ತಿದೆ.

ಅನುಬಂಧ

ಕೇರಳ, ಮಹಾರಾಷ್ಟ್ರ, ಆಂಧ್ರಪ್ರದೇಶ, ಗೋವಾ, ಹಾಗೂ ತಮಿಳುನಾಡು ಗಡಿ ಪ್ರದೇಶಗಳ ಕನ್ನಡಿಗರ ಸಮಸ್ಯೆಗಳನ್ನು ಅಧ್ಯಯನ ಮಾಡಲು ಸರ್ಕಾರ ನೇಮಿಸಿದ್ದ ಏಕಸದಸ್ಯ ಆಯೋಗದ ಮಧ್ಯಂತರ ವರದಿಯ ಶಿಫಾರಸ್ಸುಗಳು.

1) ಗಡಿನಾಡು ಪ್ರದೇಶಗಳಲ್ಲಿ ಹೆಚ್ಚಿನ ಕೈಗಾರಿಕೆಗಳನ್ನು ಸ್ಥಾಪಿಸಬೇಕು. ಪ್ರತಿ ಕೈಗಾರಿಕೆಯಲ್ಲೂ ಕನ್ನಡಿಗರಿಗೆ ಉದ್ಯೋಗ ನೂರಕ್ಕೆ ನೂರರಷ್ಟು ಇರಬೇಕು. ಅದರಲ್ಲೂ ಗಡಿನಾಡು ಅಂಚಿನಲ್ಲಿರುವ ಹೊರನಾಡು ಕನ್ನಡಿಗರಿಗೆ ಹೆಚ್ಚಿನ ಆದ್ಯತೆ ನೀಡಬೇಕು.

2) ಗಡಿನಾಡು, ಗಡಿನಾಡ ಅಂಚಿನಲ್ಲಿರುವ ಹೊರನಾಡ ಕನ್ನಡಿಗರಿಗೆ ಪ್ರತಿ ಹಳ್ಳಿಗೆ ಒಂದು ಉಚಿತ ದೂರದರ್ಶನ ಒದಗಿಸಲು ಸರ್ಕಾರ ತ್ವರಿತ ಕ್ರಮ ಕೈಗೊಳ್ಳಬೇಕು.

3) ಗಡಿನಾಡು ಕನ್ನಡ ಪ್ರದೇಶ ಅಧ್ಯಯನ ಆಯೋಗ ಮಾಡಬೇಕಾದ ಕೆಲಸ ಅಪಾರವಾಗಿದೆ. ಗಡಿನಾಡಿನ ಪ್ರತಿ ಹಳ್ಳಿಯೂ ಸೇರಿದಂತೆ ಸಮಗ್ರ ವಿವರಗಳನ್ನು ಪಡೆಯಬೇಕಾಗಿದೆ. ಅಲ್ಲದೆ ನೆರೆರಾಜ್ಯದಲ್ಲಿ ಉಳಿದಿರುವ ಗಡಿ ಅಂಚಿನ ಅಚ್ಚ ಕನ್ನಡ ಪ್ರದೇಶದ ಜನರು ಅವರ ಭಾವನೆಗಳು, ಅಲ್ಲಿನ ಜನಜೀವನ, ಕಲೆ, ರಾಜಕೀಯ, ಸಂಸ್ಕೃತಿ, ಸಾಹಿತ್ಯ, ಕನ್ನಡ ಬೆಳವಣಿಗೆ, ಆಯಾ ರಾಜ್ಯದಲ್ಲಿ ಕನ್ನಡ ಪ್ರದೇಶದ ಮುಖಂಡರುಗಳಿಗೆ ಪ್ರಜಾತಂತ್ರ ವ್ಯವಸ್ಥೆಯಲ್ಲಿ ದೊರಕಿರುವ ಅಧಿಕಾರಗಳು, ಈ ಬಗ್ಗೆ ವಿವರಗಳನ್ನು ಸಂಗ್ರಹಿಸಬೇಕಾಗಿದೆ.

4) ಗಡಿನಾಡು, ಗಡಿನಾಡ ಅಂಚಿನಲ್ಲಿರುವ ಕನ್ನಡ ಪ್ರದೇಶಗಳ ಜನರ ಸ್ಥಿತಿಗತಿಗಳ ಬಗ್ಗೆ ಕೇಂದ್ರ ಸರ್ಕಾರದೊಡನೆ ಮಾತುಕತೆ ನಡೆಸಲು ಲೋಕಸಭಾ ಸದಸ್ಯರುಗಳಿಗೆ ಸಮಗ್ರ ಮಾಹಿತಿಯನ್ನು ಗಡಿನಾಡು ಕನ್ನಡ ಅಧ್ಯಯನ ಆಯೋಗ ಒದಗಿಸಬೇಕಾಗಿದೆ. ಹೊರನಾಡಿನಲ್ಲಿರುವ ಅಲ್ಪಸಂಖ್ಯಾತ ಭಾಷಿಕರಾದ ಕನ್ನಡಿಗರಿಗೆ ಸಂವಿಧಾನ ಬದ್ಧವಾಗಿ ದೊರಕಬೇಕಾದ ಸಮಗ್ರ ವಿವರಗಳನ್ನು ಗುರುತಿಸಬೇಕಾಗಿದೆ.

5) ಗಡಿ ಭಾಗದ ಅಂಚಿನಲ್ಲಿರುವ ಹೊರನಾಡ ಕನ್ನಡ ಪ್ರದೇಶದಲ್ಲಿ ಕನ್ನಡ ಸಂಸ್ಕೃತಿ, ಸಾಹಿತ್ಯ, ಕಲೆಯನ್ನು ಅಲ್ಲಿನ ಸರ್ಕಾರಗಳು ಆಯಾ ಹಂತದಲ್ಲಿ ನಾಶ ಮಾಡಲು ಹೊರಟಿರುವ ವಿಷಯವನ್ನು ಪಟ್ಟಿ ಮಾಡಬೇಕಾಗಿದೆ.

6) ಬಹಳ ಮುಖ್ಯವಾಗಿ ಗಡಿನಾಡ ಅಂಚಿನಲ್ಲಿರುವ ನೆರೆ ರಾಜ್ಯದ ಸಮಗ್ರ ಕನ್ನಡಿಗರ ಒಂದು ಸಮೀಕ್ಷೆಯನ್ನು ನಡೆಸಬೇಕಾಗಿದೆ.

7) ಗಡಿನಾಡು, ಗಡಿನಾಡ ಅಂಚಿನಲ್ಲಿರುವ ಕನ್ನಡಿಗರು ಇದುವರೆಗೂ ಅನುಭವಿಸುತ್ತಿರುವ ಕರಾಳ ಅನುಭವದ ಸವಿಸ್ತಾರ ಚಿತ್ರಣವನ್ನು ಪಡೆಯಬೇಕಾಗಿದೆ.

8) ಗಡಿನಾಡು ಕನ್ನಡ ಅಧ್ಯಯನ ಆಯೋಗಕ್ಕೆ ಹೆಚ್ಚಿನ ಕೆಲಸ ಇರುವುದರಿಂದ ಹಿರಿಯ ಶ್ರೇಣಿಯ ಅಧಿಕಾರಿಯನ್ನು ಒಳಗೊಂಡ ಕಾರ್ಯಾಲಯದ ಅವಶ್ಯಕತೆಯಿದೆ.

9) ಗಡಿನಾಡಿನ ಅಂಚಿನಲ್ಲಿರುವ ಹೊರನಾಡ ಕನ್ನಡ ಪ್ರದೇಶದಲ್ಲಿ ಸಾಹಿತಿಗಳು, ಕವಿಗಳು, ಕಲಾವಿದರು, ಪತ್ರಕರ್ತರು - ಎಲ್ಲರ ಸಮಗ್ರ ವಿವರಗಳನ್ನು ಗಡಿನಾಡು ಪ್ರದೇಶ ಅಧ್ಯಯನ ಆಯೋಗ ಪಡೆಯಬೇಕಾಗಿದೆ.

10) ಗಡಿನಾಡು, ಗಡಿನಾಡ ಅಂಚಿನಲ್ಲಿರುವ ಹೊರನಾಡಿನಲ್ಲಿ ನಡೆದಿರುವ ಅಭಿವೃದ್ಧಿ ಕಾರ್ಯಗಳು ಆ ಪ್ರದೇಶದ ಜನರಿಗೆ ಕನಿಷ್ಠ ಸೌಲಭ್ಯ ವಿವರಗಳು, ಇಲ್ಲಿಯವರೆಗೆ ನಡೆಸಿರುವ ಅಭಿವೃದ್ಧಿ ಕಾರ್ಯಗಳು ಇವುಗಳನ್ನು ಪರಿಶೀಲಿಸಬೇಕಾಗಿದೆ.

11) ಗಡಿನಾಡು, ಗಡಿನಾಡ ಅಂಚಿನಲ್ಲಿರುವ ಹೊರನಾಡು ಭಾಗದ ಕನ್ನಡ ಹೋರಾಟಗಾರರ ಸಮಗ್ರ ವಿವರಗಳನ್ನು ಪಡೆಯಬೇಕಾಗಿದೆ.

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು: ಮಾನ್ಯ ಅಧ್ಯಕ್ಷರೇ, ಮಾನ್ಯ ವಾಟಾಳ್ ನಾಗರಾಜ್‌ರವರ ಆಯೋಗವು ಮಧ್ಯಂತರ ವರದಿಯನ್ನು ನೀಡಿದೆ ಎಂದು ಮಾನ್ಯ ಮಂತ್ರಿಗಳು ತಮ್ಮ ಉತ್ತರದಲ್ಲಿ ಹೇಳಿದ್ದಾರೆ. ಆದರೆ ಪೂರ್ತಿ ವರದಿ ನೀಡುವ ಮೊದಲೇ ಯಾವ ಕಾರಣಕ್ಕಾಗಿ ಈ ಆಯೋಗದ ಅವಧಿಯನ್ನು ಮೊಟಕುಗೊಳಿಸಲಾಗಿದೆ? ಇದರ ಜೊತೆಯಲ್ಲೇ ರಚಿಸಿದ ಹಾರನಹಳ್ಳಿ ರಾಮಸ್ವಾಮಿಯವರ ನೇತೃತ್ವದ ಆಯೋಗ ಮತ್ತು ವೀರಪ್ಪ ಮೊಯ್ಲಿಯವರ ನೇತೃತ್ವದ ಆಯೋಗಗಳು ತಮ್ಮ ಕೆಲಸವನ್ನು ಮುಂದುವರೆಸಿರುವಾಗ ಮಾನ್ಯ ವಾಟಾಳ್ ನಾಗರಾಜ್‌ರವರ ನೇತೃತ್ವದ ಆಯೋಗದ ಅವಧಿಯನ್ನು ಮಧ್ಯದಲ್ಲೇ ಮೊಟಕುಗೊಳಿಸಲಿಕ್ಕೆ ಕಾರಣಗಳೇನು? ಈ ಆಯೋಗದ ಮಧ್ಯಂತರ ವರದಿಯನ್ನು ಸರ್ಕಾರವು ಅನುಷ್ಠಾನಕ್ಕೆ ತರುತ್ತದೆಯೇ? ಆಂಧ್ರಪ್ರದೇಶ, ಮಹಾರಾಷ್ಟ್ರ ಗೋವಾ ಮತ್ತು ಇತರ ರಾಜ್ಯಗಳಲ್ಲಿರುವ ಕನ್ನಡಿಗರ ಸಮಸ್ಯೆಗಳ ಬಗ್ಗೆ ಮಾನ್ಯ ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರು ಪ್ರವಾಸ ನಡೆಸಿ ಅಧ್ಯಯನ ಮಾಡಿ ಅವುಗಳನ್ನು ಬಗೆಹರಿಸಲು ಪರಿಶೀಲನೆ ಮಾಡಿದ್ದಾರೆಯೇ?

ಶ್ರೀಮತಿ ರಾಣಿ ಸತೀಶ್: ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಹೇಳಿದಂತೆ ಕರ್ನಾಟಕ ಏಕೀಕರಣದ ನಂತರ ಪ್ರಥಮವಾಗಿ ಗಡಿನಾಡು ಮತ್ತು ಹೊರನಾಡ ಕನ್ನಡಿಗರ ಸ್ಥಿತಿಗತಿಗಳನ್ನು ಅಧ್ಯಯನ ಮಾಡುವುದಕ್ಕಾಗಿ ನಮ್ಮ ಸರ್ಕಾರ ಒಂದು ಏಕ ಸದಸ್ಯ ಆಯೋಗವನ್ನು ರಚಿಸಿ ಒಂದು ಐತಿಹಾಸಿಕ ನಿರ್ಧಾರವನ್ನು ತೆಗೆದುಕೊಂಡಿದೆ. ಆ ಆಯೋಗದವರು ತಮ್ಮ ವರದಿಯನ್ನು ಕೊಟ್ಟಿದ್ದಾರೆ. ಆ ವರದಿಯ ಅಧ್ಯಯನದ ನಂತರ ಸೂಕ್ತವಾಗಿ ಕಂಡು ಬರುವ ಅನೇಕ ಕಾರ್ಯಕ್ರಮಗಳನ್ನು ಪರಿಶೀಲಿಸಿ ಆದ್ಯತೆ ಕೊಡತಕ್ಕಂಥ ಕಾರ್ಯಕ್ರಮಗಳ ಬಗ್ಗೆ ಸಮಾಲೋಚನೆ ನಡೆಸಿ ಅದನ್ನು ಅನುಷ್ಠಾನಗೊಳಿಸಲಿಕ್ಕೆ ಪ್ರಯತ್ನವನ್ನು ನಾವು ಮಾಡುತ್ತಿದ್ದೇವೆ, ಅದನ್ನು ಮಾಡುತ್ತೇವೆ ಎಂದು ನಾನು ಹೇಳಬಯಸುತ್ತೇನೆ.

ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು: ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ಪ್ರವಾಸ ಮಾಡಿ ಗಡಿನಾಡು ಕನ್ನಡಿಗರ ಸಮಸ್ಯೆ ಬಗ್ಗೆ ಅಧ್ಯಯನ ಮಾಡಿದ್ದಾರೆಯೇ? ಎಂಬ ನನ್ನ ಪ್ರಶ್ನೆಗೆ ಅವರು ಉತ್ತರ ಕೊಡಲಿಲ್ಲ. ಗಡಿನಾಡು ಅಧ್ಯಯನ ಆಯೋಗದ ವರದಿ ಇನ್ನೂ ಪೂರ್ತಿಯಾಗಿ ಬರುವುದಿದೆಯೇ? ಅಥವಾ ಅದರ ಅವಧಿ ಇಷ್ಟಕ್ಕೇ ಮುಗಿದಿದೆಯೇ? ಈ ಆಯೋಗದ ಮಧ್ಯಂತರ ವರದಿಯಲ್ಲಿನ ಶಿಫಾರಸ್ಸುಗಳು ಸಾಕೇ? ಬೇರೆ ರಾಜ್ಯಗಳಲ್ಲಿರುವ ಕನ್ನಡಿಗರ ಸಮಸ್ಯೆಗಳ ಬಗ್ಗೆ ಸರ್ಕಾರಕ್ಕೆ ಅರಿವಿದೆಯೇ? ಅಲ್ಲಿರತಕ್ಕಂಥ ಶಾಲೆಗಳಲ್ಲಿ ಉಪಾಧ್ಯಾಯರುಗಳು ಇಲ್ಲ. ಅಲ್ಲಿ ಕನ್ನಡಿಗರು ಶಾಲೆಗಳನ್ನು ತೆರೆಯಲು ಅನುಮತಿ ಕೊಡುತ್ತಿಲ್ಲ. ಉದಾಹರಣೆಗೆ ಸೋಲಾಪುರದಲ್ಲಿ ಈ ರೀತಿ

ಮಾಡಲಾಗುತ್ತಿದೆ. ನಮ್ಮ ರಾಜ್ಯದಲ್ಲಿ ನಾವು ತೆಲುಗು, ತಮಿಳು, ಮರಾಠಿ ಮುಂತಾದ ಹೊರರಾಜ್ಯಗಳ ಎಲ್ಲಾ ಭಾಷೆಗಳ ಶಾಲೆಗಳನ್ನು ತೆರೆಯಲು ಅನುಮತಿ ಕೊಡುತ್ತೇವೆ ಮತ್ತು ಅಂತಹ ಶಾಲೆಗಳಿಗೆ ಅನುದಾನವನ್ನೂ ಸಹಾ ಕೊಡುತ್ತಿದ್ದೇವೆ. ಆದರೆ ನಮ್ಮ ಪಕ್ಕದ ರಾಜ್ಯಗಳಲ್ಲಿ ಕನ್ನಡಕ್ಕೆ ಯಾವ ರೀತಿಯ ಆದ್ಯತೆಯನ್ನೂ ಸಹ ಕೊಡುತ್ತಿಲ್ಲ. ಬೆಳಗಾಂ ಜಿಲ್ಲೆಯಲ್ಲಂತೂ ಅತೀ ಹೆಚ್ಚಿನ ಸಮಸ್ಯೆಗಳಿವೆ. ಈ ಎಲ್ಲಾ ಸಮಸ್ಯೆಗಳೂ ಸಹಾ ಮಾನ್ಯ ಸಚಿವರ ಗಮನಕ್ಕೆ ಬಂದಿದೆಯೇ? ಎಂದು ನಾನು ಕೇಳುತ್ತಿದ್ದೇನೆ. ಮಾನ್ಯ ಸಚಿವರು ದಯವಿಟ್ಟು ಇದರ ಬಗ್ಗೆ ಸರಿಯಾದ ಉತ್ತರ ನೀಡಲಿ.

ಶ್ರೀಮತಿ ರಾಣಿ ಸತೀಶ್: ಮಾನ್ಯ ಅಧ್ಯಕ್ಷರೇ, ಗಡಿನಾಡು ಅಧ್ಯಯನ ಆಯೋಗದ ಮಧ್ಯಂತರ ವರದಿಯಲ್ಲಿ ಇರತಕ್ಕಂಥ ವಿಚಾರಗಳನ್ನು ನಾವು ಹಂತಹಂತವಾಗಿ ಆದ್ಯತೆ ಮೇರೆಗೆ ಅನುಷ್ಠಾನಗೊಳಿಸುತ್ತೇವೆ ಎಂಬ ಮಾತನ್ನು ಮಾನ್ಯ ಸದಸ್ಯರಿಗೆ ಹೇಳಬಯಸುತ್ತೇನೆ.. ಇನ್ನು ಕನ್ನಡ ಶಾಲೆಗಳನ್ನು ತೆರೆಯಬೇಕಾದ ವಿಚಾರದ ಬಗ್ಗೆ ಸಂಬಂಧಪಟ್ಟ ಇಲಾಖೆಯ ಮಂತ್ರಿಗಳ ಗಮನಕ್ಕೆ ತರುತ್ತೇನೆ. ಆಯೋಗದ ವರದಿಯಲ್ಲಿನ ಶಿಫಾರಸ್ಸುಗಳ ಹಿನ್ನೆಲೆಯಲ್ಲಿ ಸೂಕ್ತ ಕಾರ್ಯಕ್ರಮಗಳನ್ನು ಹಾಕಿಕೊಂಡು ಅದನ್ನು ಅನುಷ್ಠಾನಕ್ಕೆ ತರಲಿಕ್ಕೆ ನಾವು ಪ್ರಯತ್ನ ಮಾಡುತ್ತಿದ್ದೇವೆ ಎಂಬ ಮಾತನ್ನು ನಾನು ಹೇಳಬಯಸುತ್ತೇನೆ.

ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು: ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ಪ್ರವಾಸ ಮಾಡಿದ್ದಾರೆಯೇ? ಎಂದು ನಾನು ಕೇಳಿದ ಪ್ರಶ್ನೆಗೆ ಉತ್ತರವನ್ನೇ ಕೊಡುತ್ತಿಲ್ಲ. ಆಯೋಗ ಇನ್ನೂ ತನ್ನ ವರದಿ ನೀಡಬೇಕಾಗಿದೆಯೇ? ಅಥವಾ ಈಗ ಕೊಟ್ಟಿರುವ ವರದಿಯೇ ಸಾಕೇ? ಎಂಬ ನನ್ನ ಪ್ರಶ್ನೆಗೂ ಮಾನ್ಯ ಸಚಿವರು ಉತ್ತರಿಸಲಿಲ್ಲ.

ಅಧ್ಯಕ್ಷರು: ಮಾನ್ಯ ಸದಸ್ಯರ ಸಲಹೆಯಂತೆ ಮಾನ್ಯ ಮಂತ್ರಿಗಳು ಪ್ರವಾಸ ಮಾಡಲಿ.

ಶ್ರೀಮತಿ ರಾಣಿ ಸತೀಶ್: ಮಾನ್ಯ ಅಧ್ಯಕ್ಷರೇ, ಈಗಾಗಲೇ ನಾನು ಪ್ರವಾಸ ಮಾಡಿದ್ದೇನೆ. ನನಗೆ ಸಮಸ್ಯೆಗಳ ಬಗ್ಗೆ ಅರಿವಿದೆ. ಅದರ ಬಗ್ಗೆ ನಾನು ಕ್ರಮಗಳನ್ನು ತೆಗೆದುಕೊಳ್ಳುತ್ತಿದ್ದೇನೆ ಎಂದು ನಾನು ಆಗಲೇ ಹೇಳಿದ್ದೇನೆ. ಇದಲ್ಲದೇ ಈ ಬಗ್ಗೆ ಇನ್ನೇನು ಉತ್ತರವನ್ನು ಮಾನ್ಯ ಸದಸ್ಯರು ನಿರೀಕ್ಷಿಸುತ್ತಾರೋ ಗೊತ್ತಿಲ್ಲ.

ಶ್ರೀ ಡಿ.ವಿ.ಸದಾನಂದಗೌಡ: ಮಾನ್ಯ ಅಧ್ಯಕ್ಷರೇ, ಈಗಾಗಲೇ ಕರ್ನಾಟಕ ಸರ್ಕಾರ ಗಡಿನಾಡಿನ ಬಗ್ಗೆ ತುಂಬಾ ಕಾಳಜಿ ವಹಿಸಿದೆ ಎಂಬ ಮಾತನ್ನು ರಾಜ್ಯಪಾಲರ ಭಾಷಣದಲ್ಲೂ ಸಹಾ ಉಲ್ಲೇಖಿಸಲಾಗಿದೆ. ಕರ್ನಾಟಕದ ಗಡಿ ಪ್ರದೇಶವಾಗಿರುವ ಕಾಸರಗೋಡಿನಲ್ಲಿ ಇವತ್ತು ಅತ್ಯಂತ ಗಂಭೀರವಾದಂತಹ ಸಮಸ್ಯೆ ತಲೆದೋರಿದೆ. ಈಗಾಗಲೇ ಮಹಾಜನ ಆಯೋಗದ ವರದಿ ಜಾರಿಯಾಗಬೇಕೆಂದು ಕರ್ನಾಟಕ

ಸರ್ಕಾರ ಹೇಳುತ್ತಿದೆ. ಈ ಬಗೆ ಕೇಂದ್ರ ಸರ್ಕಾರದ ಮೇಲೆ ಒತ್ತಡ ತರುವಂತಹ ಪ್ರಯತ್ನವನ್ನೇನಾದರೂ ಈ ಸರ್ಕಾರ ಮಾಡಿದೆಯೇ? ಮೊನ್ನೆ ಕೇರಳದ ಮುಖ್ಯಮಂತ್ರಿಗಳಾದ ಇ.ಕೆ.ನಾಯನಾರ್‌ರವರು ಕಾಸರಗೋಡಿನಲ್ಲಿ ವಿದ್ಯುತ್ ಸ್ಟೇಷನ್ ಒಂದನ್ನು ಉದ್ಘಾಟಿಸುತ್ತಾ, ಕಾಸರಗೋಡು ಎಂಬ ಹೆಸರನ್ನೇ ಬದಲಾಯಿಸಿ ಆ ಭಾಗಕ್ಕೆ 'ಕೊಳಕು ನಾಡು' ಎಂಬ ಹೆಸರನ್ನು ಇಡಬೇಕು ಎಂದು ಭಾಷಣವನ್ನು ಮಾಡಿದ್ದಾರೆ. ಮಹಾಜನ ಆಯೋಗದ ವರದಿಯನ್ನು ಮೀರಿ ಚಂದ್ರಗಿರಿ ನದಿಯಿಂದ ಈಚೆಗೆ ಇರುವಂತಹ ಭಾಗವನ್ನು ಅವರು ಕೇರಳದಲ್ಲಿಯೇ ಇರಿಸಿಕೊಳ್ಳಬೇಕು, ಅದನ್ನು ಬಿಟ್ಟು ಕೊಡುವುದಿಲ್ಲ ಎಂಬ ಭಾವನೆ ಅವರಿಗೆ ಇದೆ. ಅಲ್ಲಿಯ ಹೆಸರುಗಳನ್ನೂ ಕೂಡ ಬದಲಾವಣೆ ಮಾಡುವಂತಹ ಇರಾದೆ ಕೇರಳ ಸರ್ಕಾರಕ್ಕಿದೆ. ಅದು ಈ ಸರ್ಕಾರದ ಗಮನಕ್ಕೆ ಬಂದಿದೆಯೇ? ಬಂದಿದ್ದಲ್ಲಿ ಆ ಬಗ್ಗೆ ಸರ್ಕಾರ ಏನೊಂದು ಕ್ರಮ ಕೈಗೊಂಡಿದೆ? ಚಂದ್ರಗಿರಿ ನದಿಯಿಂದ ಈಚೆಗೆ ಇರುವಂತಹ ಜಾಗವನ್ನು ಮಹಾಜನ್ ಆಯೋಗದ ವರದಿಯ ಪ್ರಕಾರ ಕರ್ನಾಟಕಕ್ಕೆ ಸೇರಿಸಕೊಳ್ಳಲಿಕ್ಕೆ ಕೇಂದ್ರ ಸರ್ಕಾರದ ಮೇಲೆ ಒತ್ತಡ ತರುವಂತಹ ಪ್ರಯತ್ನಗಳೇನಾದರೂ ಸರ್ಕಾರ ಮಾಡುತ್ತಿದೆಯೇ?

ಶ್ರೀಮತಿ ರಾಣಿ ಸತೀಶ್:ಮಾನ್ಯ ಅಧ್ಯಕ್ಷರೇ, ನಾನು ಕಾಸರಗೋಡಿಗೆ ಎರಡು ಬಾರಿ ಭೇಟಿ ಕೊಟ್ಟಿದ್ದೇನೆ. ಅಲ್ಲಿಯ ಸಮಸ್ಯೆ ಬಗ್ಗೆ ಇಲಾಖೆ ಗಮನ ಹರಿಸಿದೆ. ಆ ಬಗ್ಗೆ ಈಗಾಗಲೇ ಪತ್ರವನ್ನು ಬರೆಯತಕ್ಕಂಥ ಕಾರ್ಯವನ್ನು ನಾನು ಮಾಡಿದ್ದೇನೆ. ಮತ್ತೊಮ್ಮೆ ಆ ಬಗ್ಗೆ ನಾನು ಪತ್ರ ಬರೆದು ಅದರ ಬಗ್ಗೆ ವರದಿಯೊಂದನ್ನು ತರಿಸಿಕೊಂಡು ನಂತರ ಅದರ ಬಗ್ಗೆ ನಾವು ಕ್ರಮವನ್ನು ತೆಗೆದುಕೊಳ್ಳುತ್ತೇವೆ.

ಶ್ರೀ ಗುಂಡಪ್ಪ ವಕೀಲ್: ಮಾನ್ಯ ಅಧ್ಯಕ್ಷರೇ, ಬೀದರ್ ಮತ್ತು ಬೆಳಗಾಂ ಜಿಲ್ಲೆಗಳ ಬಹುಭಾಗ ಗಡಿ ಪ್ರದೇಶವಾಗಿರುವುದರಿಂದ, ವಿಶೇಷವಾದ ಅನುದಾನವನ್ನು ಬಜೆಟ್‌ನಲ್ಲಿ ಒದಗಿಸಿಕೊಂಡು ಆ ಭಾಗಗಳಲ್ಲಿ ಅಭಿವೃದ್ಧಿ ಕಾರ್ಯಗಳನ್ನು ಕೈಗೆತ್ತಿಕೊಳ್ಳಲು ಸರ್ಕಾರ ಯೋಚಿಸಿದೆಯೇ?

ಶ್ರೀಮತಿ ರಾಣಿ ಸತೀಶ್: ಮಾನ್ಯ ಅಧ್ಯಕ್ಷರೇ, ನಾನು ಈಗಾಗಲೇ ಹೇಳಿದಂತೆ ಕನ್ನಡ ಸಮಗ್ರ ಅಭಿವೃದ್ಧಿ ಯೋಜನೆಯೊಂದು ರೂಪಿಸಿ ಅದರಡಿ ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ ಮತ್ತು ಕನ್ನಡ ಅಭಿವೃದ್ಧಿ ಪ್ರಾಧಿಕಾರಕ್ಕೆ ಹಣ ಬಿಡುಗಡೆ ಮಾಡಲಾಗಿದೆ. ಅದರ ಜೊತೆಗೆ ವಿಶೇಷವಾಗಿ ಅವರು ಕೈಗೊಳ್ಳುವಂತಹ ಕಾರ್ಯಕ್ರಮಗಳಿಗೆ ನಾವು ಹೆಚ್ಚಿನ ಅನುದಾನವನ್ನು ಕೊಟ್ಟಿದ್ದೇವೆ ಎಂಬುದನ್ನು ನಾನು ಮಾನ್ಯ ಸದಸ್ಯರ ಗಮನಕ್ಕೆ ತರುತ್ತೇನೆ.

ಶ್ರೀ ಕಟ್ಟಾಸುಬ್ರಮಣ್ಯ ನಾಯ್ಡು: ಮಾನ್ಯ ಅಧ್ಯಕ್ಷರೇ, ಕಾಸರಗೋಡು ಕನ್ನಡ

ಸಂಘದವರು ಲಾರಿ ಮೇಲೆ ನೂರು ನಾಟಕಗಳನ್ನು ಪ್ರದರ್ಶನ ಮಾಡಲು ಹೊರಟಿದ್ದರು. ಅವರು ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ಕಾಗದವೊಂದನ್ನು ಬರೆದು ನಮಗೊಂದು ಜನರೇಟರ್ ಒದಗಿಸಿಕೊಡಿ ಎಂದು ಕೇಳಿದ್ದರು. ನಿರ್ದೇಶಕರೂ ಕೂಡ ಆ ಬಗ್ಗೆ ಶಿಫಾರಸ್ಸು ಮಾಡಿ ಸರ್ಕಾರಕ್ಕೆ ಕಳುಹಿಸಿದ್ದರು. ಮಾನ್ಯ ಮಂತ್ರಿಗಳು ಅದನ್ನು ಗಮನಕ್ಕೆ ತೆಗೆದುಕೊಂಡಿಲ್ಲ. ಇದಕ್ಕೆ ಕಾರಣಗಳೇನು? ಮಾನ್ಯ ವಾಟಾಳ್ ನಾಗರಾಜ್‌ರವರನ್ನು ಗಡಿನಾಡು ಅಧ್ಯಯನ ಆಯೋಗದಿಂದ ತೆಗೆದಿದ್ದು ಏಕೆ? ಕನ್ನಡದ ಪರವಾಗಿ ಕಾಳಜಿ ಇರುವಂತಹ ಮಾನ್ಯ ಮಂತ್ರಿಗಳು ಈ ಬಗ್ಗೆ ಉತ್ತರಿಸಬೇಕೆಂದು ಕೋರುತ್ತೇನೆ.

ಶ್ರೀಮತಿ ರಾಣಿ ಸತೀಶ್: ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಹೇಳಿದ ವಿಷಯದ ಬಗ್ಗೆ ನಾನು ವರದಿಯೊಂದನ್ನು ತರಿಸಿಕೊಂಡು ಆ ಬಗ್ಗೆ ಪರಿಶೀಲಿಸಿ ನಾಟಕ ಸಂಘದವರಿಗೆ ಜನರೇಟರ್ ಅನ್ನು ಒದಗಿಸಿಕೊಡುವ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇನೆ. ಏಕ ಸದಸ್ಯ ಆಯೋಗ ಈಗಾಗಲೇ ನೀಡಿರತಕ್ಕ ಮಧ್ಯಂತರ ವರದಿಯನ್ನು ನಾವು ಅನುಷ್ಠಾನಕ್ಕೆ ತರತಕ್ಕಂಥ ಯೋಜನೆ ಮಾಡಿ ನಂತರ ಅದನ್ನು ಮುಂದುವರೆಸುವ ಬಗ್ಗೆ ನಾನು ಮಾನ್ಯ ಮುಖ್ಯಮಂತ್ರಿಗಳಲ್ಲಿ ಪ್ರಸ್ತಾಪ ಮಾಡುತ್ತೇನೆ ಎಂದು ಮಾನ್ಯ ಸದಸ್ಯರ ಗಮನಕ್ಕೆ ತರಬಯಸುತ್ತೇನೆ.

ರಾಜ್ಯದ ಗಡಿ ಅಭಿವೃದ್ಧಿ ಯೋಜನೆ.

71(738)

ಶ್ರೀ ನಾರಾಯಣ ಸ್ವಾಮಿ.ಎ.(ಆನೇಕಲ್): ಮಾನ್ಯ ಯೋಜನಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಗಡಿ ಅಭಿವೃದ್ಧಿ ಕುಂಠಿತಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಬಂದಿದ್ದಲ್ಲಿ, ಗಡಿ ಅಭಿವೃದ್ಧಿ ಯೋಜನೆಯಡಿಯಲ್ಲಿ ಬರುವ ತಾಲ್ಲೂಕು, ಹೋಬಳಿ ಕೇಂದ್ರಗಳ ವಿವರ ಒದಗಿಸುವುದು.

ಇ) ಸದರಿ ಯೋಜನೆಯಲ್ಲಿ ಈ ಹೋಬಳಿ, ತಾಲ್ಲೂಕು ಕೇಂದ್ರಗಳಿಗೆ 98-99, 99-2000 ಹಾಗೂ 2000-2001 ಸಾಲಿಗೆ ಬಿಡುಗಡೆಯಾದ ಹಣದ ವಿವರ ಒದಗಿಸುವುದು.